ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕರ ನಿರ್ದೇಶಕರಿಗೆ ನೀಡುತ್ತಿರುವ ಸೌಲಭ್ಯ

4877 - ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕಳೆದ 5 ವರ್ಷಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದ ವೇತನ ಭತ್ಯೆಗಳು ಮತ್ತು ಪರ್ಕ್‌ಗಳ ವಿವರಗಳನ್ನು ಒದಗಿಸುವುದು?*

2) *ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ಏರಿಸಿರುವುದು ವಾಸ್ತವವೆ?*

3) *ಈ ಮೇಲಿನದಕ್ಕೆ ಕರ್ನಾಟಕ ಹಾಲು ಮಹಾಮಂಡಳವು ಸರ್ಕಾರದಿಂದ ಅಗತ್ಯ ಅನುಮೋದನೆ ಪಡೆದಿದೆಯೇ? ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳದಿದ್ದಲ್ಲಿ ಕಾರಣಗಳನ್ನು ಮತ್ತು ಕೈಗೊಂಡ ಕ್ರಮವನ್ನು ನೀಡುವುದು?*

4) *ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ಮನೆಯ ನಿರ್ವಹಣೆ ವೆಚ್ಚ, ಕರ್ನಾಟಕದೊಳಗಡೆ ಮತ್ತು ಕರ್ನಾಟಕದ ಹೊರಗಡೆ ಅವರು ಕೈಗೊಂಡ ಪ್ರವಾಸಗಳ ಬಗ್ಗೆ ಕರ್ನಾಟಕ ಹಾಲು ಮಹಾಮಂಡಳವು ಭರಿಸಿದ ವೆಚ್ಚದ ವಿವರಗಳನ್ನು ಒದಿಗಿಸುವುದು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1) ವಿವರಗಳನ್ನು ಅನುಬಂಧ - ಎ ರಲ್ಲಿ ಲಗತ್ತಿಸಲಾಗಿದೆ.

2) ಇದು ವಾಸ್ತವವಲ್ಲ.

3) ಪ್ರಶ್ನೆ ಉದ್ಭವಿಸುವುದಿಲ್ಲ.

4) ಈಗಿರುವ ಹಳೆಯ ಕಛೇರಿ ಕಟ್ಟಡವನ್ನು ಅಧಿಕೃತ ವಸತಿ ಗೃಹವನ್ನಾಗಿ ದುರಸ್ಥಿ ಮಾಡಿ ಪರಿವರ್ತಿಸಲು ತಗುಲಿದ ವೆಚ್ಚವು ರೂ. 1,90,804.00 ಆಗಿದೆ. ಕಳೆದ ವರ್ಷ ವಿಮಾನಯಾನದ ಖರ್ಚು ಮತ್ತು ರೈಲು ದರವನ್ನು ಒಳಗೊಂಡು ಕರ್ನಾಟಕದೊಳಗಡೆ ಮಾಡಿದ ಪ್ರವಾಸಕ್ಕೆ ತಗುಲಿದ ವೆಚ್ಚವು ರೂ. 23,616.00 ಆಗಿದೆ. ಮತ್ತು ಕರ್ನಾಟಕ ಹೊರಗಡೆ ಮಾಡಿದ ಪ್ರವಾಸಕ್ಕೆ ತಗುಲಿದ ವೆಚ್ಚವು ರೂ. 81,372.00 ಆಗಿದೆ.

ANNEXURE

KARNATAKA CO-OPERATIVE MILK PRODUCERS FEDERATION LIMITED, CENTRAL OFFICE, - BANGALORE - 560 029.

STATEMENT SHOWING THE DETAILS OF TOTAL SALARY AND PERKS PAID TO MANAGING DIRECTOR, KARNATAKA MILK FEDERATION LTD., BANGALORE DURING THE YEAR 1995-96 T0 99-2000.

EARNIGNS	1995-96	1996-97	1997-98	1998-99	1999-2000
BASIC	115500	95430	212410	231800	238300
D.A.	77296	92948	90111	49845	89041
H.R.A	11115	12576	13200	10800	20732
C.C.A.	780	1265	1300	1200	1700
Washing Allow	-	267	360	360	360
Ex - GRATIA	-	7000	6000	6000	6000
E.L. ENCASHMENT	-	-	-	24668	-
TOTAL	**204691**	**209486**	**323381**	**324673**	**356133**
PERKS					
MEDICAL CLAIMS	6262	1500	3000	3000	3000
PROFESSIONAL DEVELOP. CHARGES	3600	5900	6000	6000	6000
HOME ORDERLY ALLOWANCE	-	3000	8000	8400	8400
TEA ALLOW	570	180			
S.A.S.	19252	4875			
DEPUTATION ALLOW	23100	5850			
EDUCATION ALLOW	1200	300			
P.F. EMPLOYER	19265	21626			
LEAVE SALARY	21201	5389			

IDLI	-	34			
GRATUITY	-	2450			
GROUP INSURANCE	-	45			
GRAND TOTAL	**94450**	**51149**	**17000**	**17400**	**17400**

NOTE :- FOR THE YEAR 1997-98 ONWARDS INCREASE IN SALARY DUE TO IMPLIMENTATION OF REVISION OF PAY SCALE AS PER GOVERNMENT ORDER.

ಕೆ.ಎಂ.ಎಫ್. ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರ ನೇಮಕ

4878 - ಶ್ರೀ ಎಸ್.ವಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿರ್ದೇಶಕರು (ಆಡಳಿತ)ಗಳನ್ನು ಯಾವ ಯಾವ ನಿಯಮಗಳಾನುಸಾರ ನೇಮಕ ಮಾಡಿಕೊಳ್ಳಲಾಗಿದೆ?

ಆ) ಈ ನಿಯಮಗಳು ಪ್ರಸ್ತುತ ಜಾರಿಯಲ್ಲಿದೆಯೇ, ಹಾಗಿಲ್ಲದಿದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆಯೇ? ವಿವರಗಳನ್ನು ಒದಗಿಸುವುದು?

ಶ್ರೀ ಡಿ.ಕೆ. ಶಿವಕುಮಾರ್ (ಕಂದಾಯ ಸಚಿವರು) :

ಅ) ಸಹಕಾರ ಸಂಘಗಳ ನಿಬಂಧಕರಿಂದ ಅನುಮೋದನೆಗೊಂಡ ಕರ್ನಾಟಕ ಹಾಲು ಮಹಾಮಂಡಳಿಯ ಉಪನಿಯಮಗಳ ಪ್ರಕಾರ ಇರುವ ತಜ್ಞಕೂಟ ಸಮಿತಿಯ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಹಾಲು ಮಹಾಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳನ್ನು ಆಡಳಿತ ಮಂಡಳಿಯು ನೇಮಕ ಮಾಡುತ್ತದೆ.

ಆ) ಹೌದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ವಸತಿ ಸಮಸ್ಯೆ

4879 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಇರುವ ನೌಕರರ ಸಂಖ್ಯೆ ಎಷ್ಟು?

2) ಎಷ್ಟು ನೌಕರರಿಗೆ ವಸತಿ ಸೌಲಭ್ಯವಿದೆ?

3) ಉಳಿದ ನೌಕರರಿಗೆ ವಸತಿ ಸೌಲಭ್ಯ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?